## ನಿವೇದನೆ

# ವಿಕಾಸಚಕ್ರದಲ್ಲಿ ಮನುಷ್ಯ ಹಿಂದಕ್ಕೆ ಹೋಗುತ್ತಿರುವನೆ?

ಡಿಜಿಟಲ್ ಗೋಡೆಗಳು ಇಟ್ಟಿಗೆ–ಕಲ್ಲು ಸಿಮೆಂಟಿನ ರಚನೆಗಿಂತಲೂ ದಪ್ಪವಾಗಿದ್ದು, ಸಂಬಂಧ ನಿರೋಧಕವಾಗಿವೆ. ಮನೆಯಲ್ಲಿನ ಗೋಡೆಗಳ ನಡುವೆ ಮನುಷ್ಯ ಸಂಬಂಧಗಳು ಅರಳಲಿಕ್ಕೆ, ಜೀವಂತವಾಗಿರಲಿಕ್ಕೆ ಸಾಧ್ಯವಿದೆ. ಆದರೆ, ಡಿಜಿಟಲ್ ಜಗತ್ತಿನ ಗೋಡೆಗಳು ಮುಖವಾಡ ಧರಿಸಿದ ಮನುಷ್ಯರನ್ನು ಸೃಷ್ಟಿಸುತ್ತಿವೆ. ಡಿಜಿಟಲ್ ಸಮಾಜದಲ್ಲಿ ಹೆಚ್ಚು ಸಕ್ರಿಯರಾಗಿರುವವರು ಭೌತಿಕ ಸಂಬಂಧಗಳನ್ನು ನಿಭಾಯಿಸಲು ವಿಫಲರಾಗುತ್ತಿರುವ ಉದಾಹರಣೆಗಳು ಹೆಚ್ಚುತ್ತಿವೆ.

ಕಾಯಿಪಲ್ಲೆ ಕತ್ತರಿಸುವಂತೆ ದೇಹವನ್ನು ಕೊಚ್ಚಿ ಫ್ರಿಜ್‌ನಲ್ಲಿಡುವ ಘಟನೆಗಳು, ಮಾನವೀಯತೆ ಮತ್ತು ಮಾನವೀಯ ಸಂಬಂಧಗಳ ಕುರಿತ ಗಂಭೀರ ಅವಲೋಕನಕ್ಕೆ ಒತ್ತಾಯಿಸುವಂತಿವೆ.

ದೆಹಲಿಯಲ್ಲಿ ಅಫ್ತಾಬ್ ಪೂನಾವಾಲಾ ಎನ್ನುವ ವ್ಯಕ್ತಿ ತನ್ನ ಸಂಗಾತಿ ಶ್ರದ್ಧಾ ವಾಲ್ಕರ್ ಎನ್ನುವ ಯುವತಿಯನ್ನು ಕೊಂದು ದೇಹವನ್ನು ತುಂಡುಗಳಾಗಿ ಕತ್ತರಿಸಿದ್ದ. ಇಂತಹುದೇ ಘಟನೆ ಮುಂಬೈಯಿಂದಲೂ ವರದಿಯಾಗಿದ್ದು, ನತದೃಷ್ಟ ಮಹಿಳೆ ತನ್ನ ಪತಿಯಿಂದಲೇ ಕೊಲೆಗೀಡಾಗಿದ್ದಾಳೆ; ತನ್ನೊಂದಿಗೆ ಬದುಕು ಹಂಚಿಕೊಂಡ ಹೆಣ್ಣಿನ ದೇಹವನ್ನು ಗಂಡು ತುಂಡು ತುಂಡು ಮಾಡಿದ್ದಾನೆ. ಬೆಂಗಳೂರಿನಲ್ಲಿ ಮಹಿಳೆಯೊಬ್ಬಳು ತನ್ನ ತಾಯಿಯನ್ನು ಕೊಂದು, ಮೃತದೇಹವನ್ನು ಸೂಟ್‌ಕೇಸ್‌ನಲ್ಲಿರಿಸಿದ್ದಾಳೆ. ಮಗರಾಯನೊಬ್ಬ ರುಬ್ಬುಕಲ್ಲು ತಲೆಯ ಮೇಲೆ ಹಾಕಿ ತಂದೆಯನ್ನು ಕೊಂದಿದ್ದಾನೆ. ಹೃದಯ ವಿದ್ರಾವಕವಾದ ಈ ಪ್ರಕರಣಗಳು ಏನನ್ನು ಸೂಚಿಸುತ್ತಿವೆ? ಸಂಬಂಧಗಳ ಸವಕಳಿಯನ್ನೇ? ಸಮಾಜ ಆರ್ದ್ರತೆ ಕಳೆದುಕೊಳ್ಳುತ್ತ ಹಿಂಸೆಯನ್ನು ಮೈಗೂಡಿಸಿಕೊಳ್ಳುತ್ತಿರುವುದನ್ನೇ?

ದೃಶ್ಯ ಮಾಧ್ಯಮಗಳಲ್ಲಿನ ಹಿಂಸಾತ್ಮಕ ಸನ್ನಿವೇಶಗಳನ್ನು ನೋಡಲು ಈಗಲೂ ಅನೇಕರು ಅಳುಕುತ್ತಾರೆ. ಉಳಿದ ಕೆಲವರು ಕೂಡ, ಸಿನಿಮಾದಲ್ಲಿನ ಹಿಂಸೆಯನ್ನು ಕಲ್ಪಿತ ದೃಶ್ಯ ಅಥವಾ ಉತ್ಪ್ರೇಕ್ಷೆಯ ನೆಲೆಗಟ್ಟಿನಲ್ಲಿ ನೋಡುತ್ತಾರೆ. ಆದರೆ, ನಮ್ಮ ಸುತ್ತಮುತ್ತ ನಡೆಯುತ್ತಿರುವ ಹಿಂಸಾತ್ಮಕ ಘಟನೆಗಳನ್ನು ನೋಡಿದರೆ, ಸಿನಿಮಾ ಮಂದಿ ಸಾಕಷ್ಟು ಸಭ್ಯರು ಎನ್ನಿಸುವಂತಿದೆ; ಊಹಿಸಿಕೊಳ್ಳಲಿಕ್ಕೂ ಕಷ್ಟವಾಗುವಂತಹ ಘಟನೆಗಳು ವರದಿಯಾಗುತ್ತಿವೆ. ಸಂಗಾತಿಯನ್ನು ಕೊಲ್ಲುವುದು, ಕೊಂದ ಮೇಲೆ ದೇಹವನ್ನು ದಾರುಣವಾಗಿ ನಡೆಸಿಕೊಳ್ಳುವುದು – ಇಂಥ ಘಟನೆಗಳು ಯಾವುದೇ ನಾಗರಿಕ ಸಮಾಜದಲ್ಲಿ ನಡೆಯುವಂತಹವಲ್ಲ. ಆಹಾರಕ್ಕಾಗಿ ಹೊರತುಪಡಿಸಿದಂತೆ ನಡೆಯುವ ಪ್ರಾಣಿಹಿಂಸೆಯನ್ನೂ ವಿರೋಧಿಸುವ ಹಾಗೂ ಸಂಕಲ್ಪಹಿಂಸೆಯ ಬಗ್ಗೆಯೂ ಹೇಸುವ ಪಥ್ಯಗಳು ಚಾಲ್ತಿಯಲ್ಲಿರುವ ಪರಿಸರದಲ್ಲಿ ಇಂಥ ಘಟನೆಗಳು ನಡೆಯುತ್ತಿರುವುದು, ಮನುಷ್ಯ ವಿಕಾಸಚಕ್ರದಲ್ಲಿ ಹಿಂದಕ್ಕೆ ಹೋಗುತ್ತಿರುವ ಅನುಮಾನ ಉಂಟುಮಾಡುವಂತಿವೆ.

ಸಂಗಾತಿಯನ್ನು ಕೊಂದು ದೇಹವನ್ನು ತುಣುಕುಗಳನ್ನಾಗಿಸಿದ ಕೃತ್ಯಗಳನ್ನು ಧರ್ಮದ ಕಣ್ಣಿನಿಂದ ಕೆಲವರು ವಿಶ್ಲೇಷಿಸುತ್ತಿದ್ದಾರೆ. ಆದರೆ, ಅಪರಾಧ ಕೃತ್ಯಗಳಿಗೆ ಧರ್ಮ–ಜಾತಿ ಎನ್ನುವುದಿರುವುದಿಲ್ಲ ಎನ್ನುವುದು ಮತ್ತೆ ಮತ್ತೆ ರುಜುವಾತಾಗುತ್ತಲೇ ಇದೆ. ಹಿಂಸಾಕೃತ್ಯಗಳ ಹಿನ್ನೆಲೆಯಲ್ಲಿ ನಮ್ಮ ಕಳವಳಕ್ಕೆ ಕಾರಣವಾಗಬೇಕಾದ ಸಂಗತಿಗಳು ಬೇರೆಯವೇ ಇವೆ. ಶಿಕ್ಷಣ ಮತ್ತು ಕೌಟುಂಬಿಕ ವ್ಯವಸ್ಥೆ ದುರ್ಬಲವಾಗಿರುವುದಕ್ಕೂ ಈ ಘಟನೆಗಳಿಗೂ ಸಂಬಂಧ ಇರುವಂತಿದೆ. ಆಧುನಿಕತೆ ಸೃಷ್ಟಿಸಿರುವ ಮಾಯಾಮೃಗಗಳನ್ನು ಬೆನ್ನತ್ತಿ, ಸಣ್ಣ ಪುಟ್ಟ ಸಂಗತಿಗಳಲ್ಲಿ ಜೀವನದ ಚೆಲುವಿರುವುದನ್ನು ಮರೆಯುತ್ತಿದ್ದೇವೆ. ಭೋಗದ ಅಭಿಲಾಷೆ ನಮ್ಮ ಅಂತಃಕರಣವನ್ನೇ ಶುಷ್ಕವಾಗಿಸುವಷ್ಟು ತೀವ್ರವಾಗುತ್ತಿರುವುದಕ್ಕೆ ಹೊಸ ಹೊಸ ನಿದರ್ಶನಗಳು ಪ್ರತಿ ನಿತ್ಯ ಎದುರಾಗುತ್ತಲೇ ಇವೆ. ಭೋಗದ ಅಪೇಕ್ಷೆ ತಪ್ಪೇನೂ ಅಲ್ಲ. ಆದರೆ, ಸುಖಕ್ಕಾಗಿ ಮನುಷ್ಯ ಮನುಷ್ಯನನ್ನು ಕೊಂದುಕೊಳ್ಳುವ ಸ್ಥಿತಿಯಲ್ಲಿ ಭೋಗ ರೋಗವಾಗಿ ಬದಲಾಗಿರುತ್ತದೆ.

ಮನುಷ್ಯ ಮತ್ತು ಪಶುವಿನ ನಡುವಣ ವ್ಯತ್ಯಾಸ ಕ್ಷೀಣಿಸುತ್ತಿರುವುದರಲ್ಲಿ ತಂತ್ರಜ್ಞಾನದ ಪಾತ್ರವೂ ಇದೆ. ಸಂಪರ್ಕ–ಸಂವಹನ ಕ್ರಾಂತಿಗೆ ಕಾರಣವಾಗಿರುವ ತಂತ್ರಜ್ಞಾನ ಮನುಷ್ಯರ ನಡುವೆ ಗೋಡೆಗಳನ್ನು ಸೃಷ್ಟಿಸುತ್ತಿರುವುದನ್ನು ಗಮನಿಸಬೇಕು. ಈ ಗೋಡೆಗಳು ಇಟ್ಟಿಗೆ–ಕಲ್ಲು ಸಿಮೆಂಟಿನ ರಚನೆಗಿಂತಲೂ ಹೆಚ್ಚು ದಪ್ಪನಾಗಿವೆ, ಸಂಬಂಧ ನಿರೋಧಕವಾಗಿವೆ. ಮನೆಯಲ್ಲಿನ ಗೋಡೆಗಳ ನಡುವೆಯೂ ಮನುಷ್ಯ ಸಂಬಂಧಗಳು ಅರಳಲಿಕ್ಕೆ, ಜೀವಂತವಾಗಿರಲಿಕ್ಕೆ ಸಾಧ್ಯವಿದೆ. ಆದರೆ, ಡಿಜಿಟಲ್ ಜಗತ್ತಿನ ಗೋಡೆಗಳು ಮುಖವಾಡ ಧರಿಸಿದ ಮನುಷ್ಯರನ್ನು ಸೃಷ್ಟಿಸುತ್ತಿವೆ. ಡಿಜಿಟಲ್ ಸಮಾಜದಲ್ಲಿ ಹೆಚ್ಚು ಸಕ್ರಿಯರಾಗಿರುವವರು ಭೌತಿಕ ಸಂಬಂಧಗಳನ್ನು ನಿಭಾಯಿಸಲು ವಿಫಲರಾಗುತ್ತಿರುವ ಉದಾಹರಣೆಗಳು ಹೆಚ್ಚುತ್ತಿವೆ. ಸೈಬರ್ ಅಪರಾಧಗಳು ವಿಶ್ವವ್ಯಾಪಿಯಾಗಿರುವುದಕ್ಕೂ 'ಡಿಜಿಟಲ್ ಸಾಮಾಜಿಕತೆ' ವ್ಯಾಪಕವಾಗಿರುವುದಕ್ಕೂ ಸಂಬಂಧವಿದೆ. ಸಾಮಾಜಿಕ ಸಂಬಂಧಗಳ ಸ್ವರೂಪದಲ್ಲಿನ ಬದಲಾವಣೆ ಖಿನ್ನ ಸಮೂಹವೊಂದು ರೂಪುಗೊಂಡಿರುವುದಕ್ಕೂ, ಮದುವೆಗಳು ಮುರಿದು ಬೀಳುತ್ತಿರುವುದಕ್ಕೂ ಪ್ರಮುಖ ಕಾರಣವಾಗಿದೆ.

ಹೊಸ ತಲೆಮಾರಿನ ತರುಣ ತರುಣಿಯರಿಗೆ ಸಂಬಂಧಗಳ ಬಗ್ಗೆ, ಮೌಲ್ಯಗಳ ಬಗ್ಗೆ ಆಸ್ಥೆಯಿಲ್ಲ ಎಂದು ಹೇಳುವುದು ಸುಲಭ. ಅವರ ಈ ಮನೋಧರ್ಮದ ಹಿಂದೆ ತಲೆಮಾರುಗಳ ಕೊಡುಗೆ ಸಾಕಷ್ಟಿದೆ. ಮೌಲ್ಯಗಳ ಅಧಃಪತನ ಇದ್ದಕ್ಕಿದ್ದಂತೆ ಸಂಭವಿಸುವಂತಹದ್ದಲ್ಲ. ಸವಕಳಿ ಕ್ರಿಯೆ ನಮ್ಮಿಂದ ಉಂಟಾದರೆ, ಅದು ಮುಂದಿನ ತಲೆಮಾರುಗಳಲ್ಲಿ ಪ್ರಪಾತದತ್ತ ಮುಖ ಮಾಡುತ್ತದೆ. ಈಗ ಅಂತಹುದೇ ಸ್ಥಿತಿ ಎದುರಾಗಿದೆ. ಈ ಸ್ಥಿತಿಯಿಂದ ಹೊರಬರುವ ಕ್ರಿಯೆ ವೈಯಕ್ತಿಕ ಹಂತದಿಂದಲೇ ಶುರುವಾಗಬೇಕು; ಮನೆಗಳಿಂದ–ಶಾಲೆಗಳಿಂದ ಆರಂಭವಾಗಬೇಕು. ನಮ್ಮ ಮಕ್ಕಳಿಗೆ ಒಳ್ಳೆಯ ಶಿಕ್ಷಣ ನೀಡಿದರೆ ಸಾಲದು, ಆಸ್ತಿ ಮಾಡಿಟ್ಟರೆ ಜವಾಬ್ದಾರಿ ಮುಗಿಯದು. ಶಿಕ್ಷಣ, ಉದ್ಯೋಗ, ಹಣದಷ್ಟೇ ನೈತಿಕತೆಯೂ ಬದುಕಿಗೆ ಮುಖ್ಯ ಎನ್ನುವುದನ್ನು ಮಕ್ಕಳಿಗೆ ಮನದಟ್ಟು ಮಾಡಿಸಬೇಕಾಗಿದೆ. ಈ ನಿಟ್ಟಿನಲ್ಲಿ ಹಿರಿಯರು ತಮ್ಮನ್ನು ತಾವು ಮಾನವೀಯಗೊಳಿಸಿಕೊಳ್ಳಬೇಕಾದ ಸವಾಲಿಗೆ ಒಡ್ಡಿಕೊಳ್ಳಬೇಕಾಗಿದೆ.

■ ರಘುನಾಥ ಚ.ಹ.




ಈಶ್ವರ್